ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸೋಮವಾರಪೇಟೆ

ಸಿ.ಸಿ. ನಂ. 452 / 2024

| | | |
|---|---|---|
| ಹೆಸರು | : ಹೀರಣ್ಣ ಮ್ಯಾಕೇರಿ | ಪಿಡಬ್ಲ್ಯೂ-2 |
| ತಂದೆಯ ಹೆಸರು | : ಅಮೋಗಿಸಿದ್ದ | ಸಿಡಬ್ಲ್ಯೂ-4 |
| ವಯಸ್ಸು | : ವರ್ಷ 30 | |
| ವೃತ್ತಿ | : ಅಬಕಾರಿ ಪೇದೆ | |
| ವಾಸ ಸ್ಥಳ | : ಸೋಮವಾರಪೇಟೆ | |

ದಿಃ 05.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:

1. ದಿಃ05-11-2019 ರಿಂದ ಸೋಮವಾರಪೇಟೆ ವಲಯ ಕಚೇರಿಯಲ್ಲಿ ಅಬಕಾರಿ ಪೇದೆಯಾಗಿ ಕೆಲಸ ಮಾಡುತ್ತಿದ್ದೇನೆ.

ದಿಃ 28-05-2024 ರಲ್ಲಿ ಕಳ್ಳಬಟ್ಟಿ ಸರಾಯಿಯ 180 ಮಿಲಿಯ 2 ಗಾಜಿನ ಬಾಟಲಿಗಳು ಮತ್ತು 180 ಮಿಲಿಯ 3 ಬೆಲ್ಲದ ಪುಳಂಗಜಿಯ ಬಾಟಲಿಗಳನ್ನು ತೆಗೆದುಕೊಂಡು ಬೆಂಗಳೂರಿನ ಕೇಂದ್ರ ರಸಾಯನಿಕ ಪ್ರಯೋಗಾಲಯಕ್ಕೆ ಕೊಟ್ಟಿರುತ್ತೇನೆ. ಸದರಿ ಪತ್ರವನ್ನು ನಿಪಿ 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ 11ಎ ಎಂದು ಗುರುತಿಸಲಾಯಿತು. ದಿಃ13-08-2024 ರಂದು ತಂದು ಎಫ್.ಎಸ್.ಎಲ್ ವರದಿಯನ್ನು ವಲಯ ಅಧಿಕಾರಿಗೆ ಒಪ್ಪಿಸಿರುತ್ತೇನೆ. ಸದರಿ ವರದಿಯನ್ನು ನಿಪಿ 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ 12 ಎಂದು ಗುರುತಿಸಲಾಯಿತು. ಇದರ ಸಂಬಂಧ ನನ್ನ ಮೇಲಾಧಿಕಾರಿಗೆ ವರದಿ ನೀಡಿರುತ್ತೇನೆ. ಸಾಕ್ಷಿ ಮುದ್ದೆ ಮಾಲನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಮುಮಾ 1 ಮತ್ತು 2 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಶ್ರೀ ಕೆ.ಹೆಚ್.ವಿ ವಕೀಲರಿಂದ:</u>

ನಾನು ಯಾವುದೇ ಮಾದರಿಯನ್ನು ರಸಾಯನಿಕ ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಯಾವುದೇ ವರದಿ ಮತ್ತು ಸೀಸೆಗಳನ್ನು ವಾಪಸ್ಸು ತಂದಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಕೋರಿಕೆ ಪತ್ರ ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-
ಪ್ರ.ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ
ಸೋಮವಾರಪೇಟೆ